ಓ.ಎಸ್‌ಃ 533/2015

ಪಿ.ಡಬ್ಲ್ಯೂಃ 01

ಶೀಲಾ ಪೂಜಾರಿ

**ದಿನಾಂಕಃ 26-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು 4 ನೇ ಪ್ರತಿವಾದಿ ಪರ ಶ್ರೀಮತಿ. ಎಸ್. ಆರ್. ಜಿ. ವಕೀಲರಿಂದಃ**

1. ದ್ಯಾಮವ್ವ ನನ್ನ ಗಂಡನ ತಾಯಿ. ದಾವಾ ಸ್ವತ್ತು ಸದರಿ ದ್ಯಾಮವ್ವಳ ತಾಯಿಯ ಆಸ್ತಿ. ಸದರಿ ದ್ಯಾಮವ್ವಳಿಗೆ ನೀಜಪ್ಪ ಎಂಬ ಒಬ್ಬ ಸಹೋದರ ಮಾತ್ರ ಇದ್ದಾರೆ. ಸದರಿ ದ್ಯಾಮವ್ವ ಮತ್ತು ನೀಜಪ್ಪ ಇಬ್ಬರಿಗೂ ಸೇರಿ 3 ಎಕರೆ 35 ಗುಂಟೆ ಜಮೀನು ಬಂದಿತು. ಯಾವಾಗ ಮತ್ತು ಹೇಗೆ ಎಂದು ನನಗೆ ಗೊತ್ತಿಲ್ಲ. ಸದರಿ 3 ಎಕರೆ 35 ಗುಂಟೆ ಜಮೀನನ್ನು ಅವರಿಬ್ಬರೂ ಹೇಗೆ ವಿಭಾಗ ಮಾಡಿಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರಿಬ್ಬರೂ ಯಾವುದೇ ವಿಭಾಗ ಮಾಡಿಕೊಂಡಿಲ್ಲ ಮತ್ತು ಹಾಗೇ ಉಳುಮೆ ಮಾಡುತ್ತಾರೆ ಎಂದು ನುಡಿಯುತ್ತಾರೆ.

2. ನಾನು ಈ ದಾವೆಯನ್ನು 1 ಎಕರೆ 36 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ. ಪಹಣಿ ಪತ್ರಿಕೆಗಳಲ್ಲಿ 1 ಎಕರೆ 36 ಗುಂಟೆ ಜಮೀನು ಪ್ರತ್ಯೇಕವಾಗಿಲ್ಲವೆಂದರೆ ಸರಿ. ಈ ದಾವೆ ಸಲ್ಲಿಸಿದ ಸಮಯದಿಂದ ಸದರಿ 1 ಎಕರೆ 36 ಗುಂಟೆ ಜಮೀನು ಖರೀದಿದಾರರಾದ ಮುದಕಪ್ಪ ಅಂದರೆ 4 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ.

3. ದ್ಯಾಮವ್ವಳ ಸಹೋದರನಾದ ನೀಜಪ್ಪನಿಗೆ ದುರ್ಗಪ್ಪ ತಾ. ಸೀತವ್ವ ಮಾದರ ಒಬ್ಬರೇ ವಾರಸುದಾರರು ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

4. ನನ್ನ ಅತ್ತೆ ದ್ಯಾಮವ್ವ ದಿಃ 06.01.2009 ರಂದು ತೀರಿಕೊಂಡಿದ್ದಾಳೆ. ನನ್ನ ಗಂಡ ಯಮನಪ್ಪ ದಿಃ 20.07.2002 ರಲ್ಲಿ ತೀರಿಕೊಂಡಿದ್ದಾರೆ. ನನ್ನ ಗಂಡನ ಮರಣಾನಂತರ ನಾನು ನನ್ನ ಮಕ್ಕಳು ಕಲಗುರ್ಕಿ ಗ್ರಾಮದಲ್ಲಿ ನೆಲ್ಲಿಸಿದ್ದೇವೆ. ಸದರಿ ಕಲಗುರ್ಕಿ ಗ್ರಾಮದಲ್ಲಿ ದ್ಯಾಮವ್ವಳಿಗೆ ಸೇರಿದ ಒಂದು ಖಾಲಿ ಜಾಗೆ ಇದೆ ಎಂದರೆ ಸರಿ. ಅದೇ ಜಾಗೆಯಲ್ಲಿ ನಾವು ವಾಸಿಸುತ್ತಿದ್ದೇವೆ ಎಂದರೆ ಸರಿ. ಆದರೆ ದಾಖಲೆಗಳಲ್ಲಿ ಅದು ಇನ್ನೂ ಮೃತ ದ್ಯಾಮವ್ವಳ ಹೆಸರಿನಲ್ಲಿಯೇ ಇದೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

5. ದ್ಯಾಮವ್ವಳ ಮಗಳಾದ 1 ನೇ ಪ್ರತಿವಾದಿ ತನ್ನ ಗಂಡನ ಮನೆಯಲ್ಲಿ ವಾಸಿಸುತ್ತಾಳೆ ಎಂದರೆ ಸರಿ. ನನ್ನ ಮತ್ತು 2 ಮತ್ತು 3 ನೇ ಪ್ರತಿವಾದಿಗಳ ನಡುವೆ ಈವರಗೊ ಯಾವುದೇ ಪಾಲು ವಾಟ್ನಿ

ಆಗಿಲ್ಲ. ನಾವೆಲ್ಲರೂ ಒಂದೇ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ. ನಮ್ಮ ನಡುವೆ ಯಾವುದೇ ವಾಟ್ನಿಯಾಗದ ಕಾರಣ ನಮ್ಮಗಳ ವ್ಯವಹಾರಗಳ ಬಗ್ಗೆ ನಮ್ಮೆಲ್ಲರಿಗೂ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಶಶಿ ಪೂಜಾರಿ ಮತ್ತು ಹಣಮಂತ ನಡುವಿನಮನಿ ಇವರು ಕಲಗುರ್ಕಿ ಗ್ರಾಮದವರು ಎಂದರೆ ಸರಿ. 4 ನೇ ಪ್ರತಿವಾದಿ ಕೋಲ್ಹಾರ ಗ್ರಾಮದವನು ಎಂದರೆ ಸರಿ.

6. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಮೃತ ದ್ಯಾಮವ್ವ ಎಂದು ಹೇಳಿಕೊಂಡು ಸದರಿಯವರನ್ನು ಶಶಿ ಪೂಜಾರಿ ಮತ್ತು ಹಣಮಂತ ನಡುವಿನಮನಿ ಗುರುತಿಸುವುದಾಗಿ ಹೇಳಿಕೊಂಡು ಮತ್ತು ಒಪ್ಪಿಗೆ ಸಹಿ ಎಂದು 2 ನೇ ಪ್ರತಿವಾದಿ ಸಹಿ ಮಾಡಿ ಅವರೆಲ್ಲರೂ ಶಾಮೀಲಾಗಿ 4 ನೇ ಪ್ರತಿವಾದಿಯ ಹೆಸರಿಗೆ ಸುಳ್ಳು ಖರೀದಿ ಪತ್ರ ಸೃಷ್ಟಿಸಿದ್ದಾರೆ ಎಂದು ಈ ದಾವೆಯನ್ನು ಸಲ್ಲಿಸಿದಂತೆ ಅವರ ಮೇಲೆ ಕ್ರಿಮಿನಲ್ ಪ್ರಕರಣ ಹಾಕಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ನನಗೆ ಸದರಿ ಖರೀದಿ ಪತ್ರ ಸುಳ್ಳು ಖರೀದಿ ಪತ್ರ ಅಲ್ಲ ಎಂದು ಗೊತ್ತಿದ್ದರಿಂದ ನಾನು ಕ್ರಿಮಿನಲ್ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ನಾನು 4 ನೇ ಪ್ರತಿವಾದಿಯಿಂದ ದಾವಾ ಸ್ವತ್ತನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**